ಅಂದದ ಪುಷ್ಪ ವಿನ್ಯಾಸ ಮತ್ತು ಪ್ರಖರ ಹಳದಿ ವರ್ಣದ ನಭೋಮುಖಿ ಕುಸುಮಗಳಿಂದ ಎಲ್ಲರ ಮನಸೂರೆಗೊಳ್ಳುವ ಸಸ್ಯವೇ ಅರಣ್ಯದ ಅರಸ (ಕಿಂಗ್ ಆಫ್ ಫಾರೆಸ್ಟ್). ಇದರ ವೈಜ್ಞಾನಿಕ ಹೆಸರು ಕಾಸಿಯ

ಅಲಾಟ ಅಥವ ಸೆನ್ನ ಅಲಾಟ. ಕ್ಯಾಂಡಲ್ ಬ್ರಷ್, ಎಂಪರರ್ಸ್ ಕ್ಯಾಂಡಲ್‌ಸ್ಟಿಕ್ ಇತ್ಯಾದಿ ಹೆಸರುಗಳೂ ಇವೆ.

ಪೊದೆಯಂತಿರುವ ಈ ಗಿಡ ಮೂರು ನಾಲ್ಕು ಮೀಟರುಗಳ ಎತ್ತರಕ್ಕೆ ಬೆಳೆಯುತ್ತದೆ. ಬೀಜಕೋಶಗಳು ಕಡುಗಂದು ಅಥವ ಕಪ್ಪು ಬಣ್ಣದ್ದಾಗಿದ್ದು ಸುಮಾರು ಹದಿನೈದು ಸೆಂಟಿಮೀಟರ್ ಉದ್ದವಿರುತ್ತವೆ. ಇದರ ಎಲೆಗಳು ಸಂಜೆಯಾಗುತ್ತಿದ್ದಂತೆ ಮುದುಡಿಕೊಳ್ಳುತ್ತವೆ.

ಮೆಕ್ಸಿಕೊ ಮೂಲದ ಈ ಸಸ್ಯ ಎಲ್ಲ ಪ್ರದೇಶಗಳಲ್ಲೂ ಬೆಳೆಯುತ್ತದೆ. ಪ್ರತಿ ವರ್ಷ ಸೆಪ್ಟಂಬರ್‌ನಿಂದ ಫೆಬ್ರುವರಿಯವರೆಗೆ ಅರಳುವ ಇದರ ಚೆಲುವಿನ ಹೂಗಳು ಅಲಂಕಾರಿಕ ಪುಷ್ಪಗಳಾಗಿ ಬಳಸಲ್ಪಡುತ್ತವೆ. ಇದರ ಎಲೆಗಳ ರಸವನ್ನು ಶಾಂಪೂ, ಸಾಬೂನು ಮತ್ತು ತ್ವಚೆರಕ್ಷಕ ಲೇಪನಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

ಈ ಗಿಡದ ಕಾಂಡ, ಎಲೆಗಳು, ಬೇರುಗಳು, ಹಾಗೂ ಹೂಗಳು ಅನೇಕ ಔಷಧೀಯ ಗುಣಗಳನ್ನು ಹೊಂದಿವೆ. ಶೀತ, ಕೆಮ್ಮು, ಜ್ವರ, ಅಧಿಕ ರಕ್ತದೊತ್ತಡ, ವಿಷಜಂತುಗಳ ಕಡಿತ– ಹೀಗೆ ಹಲವಾರು ಕಾಯಿಲೆಗಳ ನಿವಾರಣೆಯಲ್ಲಿ ಈ ಸಸ್ಯ ನೆರವಾಗುತ್ತದೆ. ಹುಳುಕಡ್ಡಿಯ ನಿವಾರಣೆಯಲ್ಲಿ ಇದರ ಬಳಕೆ ಅಧಿಕವಾಗಿರುವುದರಿಂದ ಇದು ರಿಂಗ್‌ವರ್ಮ್ ಬ್ರಷ್, ದದ್‌ಮರ್ದನ್, ದದ್‌ಮಾರಿ ಮುಂತಾದ ಹೆಸರುಗಳಿಂದಲೂ ಕರೆಯಲ್ಪಡುತ್ತದೆ.





